19. ಹಾಲೀ ಶಿವಮೊಗ್ಗಾ ಜೈಲ್‌ನಲ್ಲಿ 225 ಮಂದಿ ಖೈದೀರಿದ್ದಾರೆ, ಈ ಸಾಲ್‌ನಲ್ಲಿ ಸುಮಾರ್ 250 ವರಿಗೆ ಜಾಸ್ತಿಯಾಗಬಹುದಾಗಿ ಅಂದಾಜು ಯಿರುತ್ತೆ.

20. ಆಹಾರ ದರದ ಪಟ್ಟಿಯನ್ನು 1880ನೇ ಇಸವಿ ಜನವರೀ 10ನೇ ಮಕ್ಕು ಮಿನ ಮೈಸೂರು ಗೆಜಟ್ಟಿನಿಂದಾಗಲಿ, ಶಿವಮೊಗ್ಗಾ ಜೈಲ್ ಸೂಪರ್‌ಟೆಂಡೆಂಟರವರನ್ನು ಕೇಳಿ ಆಗಲಿ ತಿಳಿದುಕೊಳ್ಳಬಹುದು.

ಪಿ. ಪಂಜನಾಥರಾವ್,
ಜೈಲ್ ಸೂಪರ್‌ಟೆಂಡೆಂಟ್.

ಕಡೂರು ಡಿಸ್ಟ್ರಿಕ್ಟ್.

ತಾರೀಖು 15ನೇ ಜನವರೀ 1885.

ಇದರಿಂದ ಸರ್ವರತಿಳುವಳಿಕೆ ಬಗ್ಗೆ ಪ್ರಕಟಪಡಿಸುವದೇನಂದರೆ, ಕಡೂರು ಡಿಸ್ಟ್ರಿಕ್ಟು ತರೀಕೆರೆ ತಾಲ್ಲೂಕು ಕಾರ್ಮಾದುರ್ಗಕ್ಕೆ ಕೀರಿದ 180 ಯಕರೆ ವಿಸ್ತೀರ್ಣವುಳ್ಳ ಪೂರಾ 6ನೇ ಸರ್ವೇ ನಂಬರ್ ಬೀಳು ಜಮೀನಿಗೆ ಕಾಫಿ ಸಾಗುವಳೀ ಬಗ್ಗೆ ದರಖಾಸ್ತು ಬಂದಿರುವದರಿಂದ ಸದರೀ ಜಮೀನು 1885ನೇ ಇಸವಿ ಫಿಬ್ರವರೀ 20ನೇ ಮಕ್ಕು ಮಿನಲ್ಲಿ ತರೀಕೆರೆ ತಾಲ್ಲೂಕು ಅಮಲ್‌ದಾರ್ರು ರೂಬರೂ ತರೀಕೆರೆ ಮೊಕ್ಕಾಮಿನಲ್ಲಿ, ಐಯಿಂದ ಸದರೀ ಜಮೀನಿಗೆ ಮೊಕರರ್ ಮಾಪಲ್ಪಡುವ ಕಂದಾಯ ತೆರುವದಕ್ಕೂ, ಯಾವದಾದರೂ ನೀರು ವಳಸಿಕೊಳ್ಳುವದರ ಮತ್ತು ಆವಶ್ಯಕವಾದ ಯಾವದಾದರೂ ಮಾರ್ಗದ ಹಕ್ಕುದಾರಿಗೂ ವಳಪಟ್ಟು, ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ಕ್ರಯದಾರನು ಹರಾಜು ಖೈದಾದ ಕೂಡ್ಲೇ ಕ್ರಯದ ಮೊಬಲಗಿಗೆ ಪೈಕೀ ಶೇಕಡಾ 25ರಂತೆ ಆಗುವ ಮೊಬಲಗನ್ನು ಡಿಪಾಜಿಟ್ ಯಿಡತಕ್ಕದ್ದು. ಬಾಕೀ ಕ್ರಯದ ಮೊಬಲಗನ್ನು ಹರಾಜು ತಾರೀಖು ಲಾಗಾಯತು 15 ದಿವಸಗಳ ವಳಗಾಗಿ ಪಾವತೀ ಮಾಡದೆ ಯಿದ್ದಲ್ಲಿ ಮೊದಲು ಡಿಪಾಜಿಟ್ ಯಿಡಲ್ಪಟ್ಟ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

3. ಹಾಗೆ ಡಿಪಾಜಿಟ್ ಯಿಡಲ್ಪಡದೆ ಹೋದರೆ ಯಾ ಕ್ರಯದ ಬಾಕೀ ಮೊಬಲಗು ಪಾವತೀ ಮಾಡಲ್ಪಡದೆ ಯಿದ್ದರೆ, ಜಮೀನು ಅವ್ವಲ್ ಕ್ರಯದಾರನ ಖರ್ಚಿಗೂ ಲುಕ್‌ಸಾನಿಗೂ ವಳಪಟ್ಟು ಪುನಹಾ ಹರಾಜಿ ಹಾಕಲ್ಪಡುವದು.

4. ಜಮೀನಿನ ಹರಾಜು ಡೆಪ್ಯೂಟಿ ಕಮ್ಮಿಷನರವರಿಂದ ಕಾಯಂ ಮಾಡಲ್ಪಡುವ ಪರಿಯಂತ ಅಖೈರಾದ್ದಾಗಿರತಕ್ಕದ್ದಲ್ಲವು.

5. ಸದರೀ ಜಮೀನಿನ ಚಕ್ಕುಬಂದಿಯು ಇದರ ಕೆಳಗೆ ಕಾಣಿಸಿರುತ್ತೆ; ಇನ್ನೂ ಜಾಸ್ತಿ ತಪಸೀಲ್‌ಗಳು ಹರಾಜ್ ಕಾಲದಲ್ಲಿ ಕೇಳಿ ತಿಳಿದುಕೊಳ್ಳಬಹುದು. ತಪಸೀಲ್‌ನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಯಿರುವ ಗಲ್ಲತಿಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

ಉತ್ತರಕ್ಕೆ—ಸರ್ವೇ ನಂಬರ್ 21
ದಕ್ಷಿಣಕ್ಕೆ—ಅತ್ತಿಗೆರೆ ಗ್ರಾಮದ ಜಮೀನು
ಪೂರ್ವಕ್ಕೆ—ಸಂತವೇರಿಯಿಂದ ಚಿಕ್ಕಮಗಳೂರಿಗೆ ಹೋಗುವ ರಸ್ತೆ
ಪಶ್ಚಿಮಕ್ಕೆ—ಸರ್ವೇ ನಂಬರ್ 5

ಮಹಮ್ಮದ್ ಅಲ್ಲಿ, ಕೆ. ಬಿ.,
ಆಫಿಷಿಯೇಟಿಂಗ್ ಡೆಪ್ಯೂಟಿ ಕಮ್ಮಿಷನರ್.

ಸ್ಯ 1884ನೇ ಇಸವಿ ನವೆಂಬರ್ ತಿಂಗಳ ಕಾಲಸ್ಥಿತಿ ರಿಪೋರ್ಟುಗಳು.

ಬೆಂಗಳೂರು ಡಿಸ್ಟ್ರಿಕ್ಟ್.

ಮಳೆ—ಹೆಡ್ ಕ್ವಾರ್ಟರ್‌ನಲ್ಲಿ 3 ಅಂಗುಲ 47 ಸೆಂಟಿಸ್ ಮಳೆ ಆಳೆಯಲ್ಪಟ್ಟಿತು. ಡಿಸ್ಟ್ರಿಕ್ಟು ಮುಳೆ ಸಾಧಾರಣವಾಗಿ ಅದ ಮಳೆಯಿಂದ ಬೆಳೆಯಲ್ಲಿರುವ ಫಸಲಿಗೆ ವಿಶೇಷ ನೀಲು ಉಂಟಾಯಿತು.

ಬೆಳೆಯ ಸ್ಥಿತಿ—ತರೀ ಖುಷ್ಕಿ ಫಸಲುಗಳು ಛಂದಾಗಿವೆ, ರಾಗಿ ರೇಷೆ ಕೆಲಸವು ಕೆಲವು ಸ್ಥಳಗಳಲ್ಲಿ ಪ್ರಾರಂಭಿಸಲ್ಪಟ್ಟಿತು.